ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER :
ದಿನಾಂಕ : DATE : 1 | 11 | 2019

# ಅನರ್ಹ ಶಾಸಕ ರಮೇಶ್ ಜಾರಕಿಹೊಳಿಗೆ ಐಟಿ ಶಾಕ್

- ಕೋಟ್ಯಂತರ ಮೌಲ್ಯದ ಬೇನಾಮಿ ಆಸ್ತಿ
- 105 ಕೋಟಿ ಆಸ್ತಿ ಮುಟ್ಟುಗೋಲು
- ಸೌಭಾಗ್ಯ ಶುಗರ್ಸ್‌ನಲ್ಲಿ 105 ಕೋಟಿ ಹೂಡಿಕೆ
- ಪತ್ನಿ, ಪುತ್ರರ ಹೆಸರಲ್ಲಿ ಬಂಡವಾಳ



ಬೆಂಗಳೂರು: ಮೈತ್ರಿ ಸರಕಾರ ಉರುಳಲು ಪ್ರಮುಖ ಕಾರಣರಾಗಿದ್ದ ಗೋಕಾಕ ಕ್ಷೇತ್ರದ ಅನರ್ಹ ಶಾಸಕ ರಮೇಶ್ ಜಾರಕಿಹೊಳಿಗೆ ಆದಾಯ ತೆರಿಗೆ ಇಲಾಖೆ (ಐಟಿ) ಶಾಕ್ ನೀಡಿದೆ.

ರಮೇಶ್ ಜಾರಕಿಹೊಳಿ ಅವರ ಕೋಟ್ಯಂತರ ಮೌಲ್ಯದ ಬೇನಾಮಿ ಆಸ್ತಿಯನ್ನು ಐಟಿ ಇಲಾಖೆ ಪತ್ತೆ ಹಚ್ಚಿದೆ. ಒಟ್ಟು 34 ಹೆಸರುಗಳಲ್ಲಿದ್ದ 105.61 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಬೇನಾಮಿ ಪ್ರಾಪರ್ಟಿ ಟ್ರಾನ್ಸಾಕ್ಷನ್ಸ್ ಅಡಿಯಲ್ಲಿ ಐಟಿ ಈ ಕ್ರಮ ಕೈಗೊಂಡಿದೆ ಎಂದು ತಿಳಿದು ಬಂದಿದೆ.

ರಮೇಶ್ ಜಾರಕಿಹೊಳಿ ಅವರ ಪತ್ನಿ, ಇಬ್ಬರು ಮಕ್ಕಳು ಮತ್ತು ಸಂಬಂಧಿಕರ ಹೆಸರಲ್ಲಿ ಬೇನಾಮಿಯಾಗಿ ಆಸ್ತಿ ಮಾಡಲಾಗಿದೆ. ರಮೇಶ್ ಜಾರಕಿಹೊಳಿ ವ್ಯವಸ್ಥಾಪಕ ನಿರ್ದೇಶಕ (ಎಂಡಿ) ಆಗಿರುವ ಸೌಭಾಗ್ಯ ಶುಗರ್ಸ್ ಸಂಸ್ಥೆಯಲ್ಲಿ 105 ಕೋಟಿ ರು. ಹೂಡಿಕೆಯಾಗಿದೆ. ರಮೇಶ್ ಜಾರಕಿಹೊಳಿ ಸಂಬಂಧಿಕರ ಹೆಸರಲ್ಲಿ ಈ ಸಂಸ್ಥೆಯಲ್ಲಿ ಹಣ ತೊಡಗಿಸಲಾಗಿದೆ. ರಮೇಶ್ ಜಾರಕಿಹೊಳಿ ಪತ್ನಿ ಜಯಶ್ರೀ ಹೆಸರಲ್ಲಿ 9 ಕೋಟಿ ರು. ಹೂಡಿಕೆಯಾಗಿದೆ.

ಐಟಿ ಅಧಿಕಾರಿಗಳ ವಿಚಾರಣೆ ವೇಳೆ ತಮಗೆ ಈ ವ್ಯವಹಾರದ ಬಗ್ಗೆ ಏನೂ ಗೊತ್ತಿಲ್ಲವೆಂದು ಜಯಶ್ರೀ ಹೇಳಿದ್ದಾರೆ. ಇನ್ನು, ರಮೇಶ್ ಜಾರಕಿಹೊಳಿ ಅವರ ಇಬ್ಬರು ಪುತ್ರರಾದ ಅಮರನಾಥ ಜಾರಕಿಹೊಳಿ ಮತ್ತು ಸಂತೋಷ್ ಜಾರಕಿಹೊಳಿ ಹೆಸರಲ್ಲಿ ತಲಾ ಏಳೂವರೆ ಕೋಟಿ ರು. ಹೂಡಿಕೆಯಾಗಿದೆ. ಇಬ್ಬರಿಗೂ ಇದರ ಬಗ್ಗೆ ಏನೂ ತಿಳಿದಿಲ್ಲವೆನ್ನಲಾಗಿದೆ.

ಸೌಭಾಗ್ಯ ಶುಗರ್ಸ್ ಕಂಪನಿಯಲ್ಲಿ ರಮೇಶ್ ಜಾರಕಿಹೊಳಿ ಅವರ ಭಾವಮೈದುನ ಶಂಕರ್ ಪಾವಡೆ, ಸಂಬಂಧಿ ವಸಂತ್ ಪಾಟೀಲ್ ಅವರ ಹೆಸರಲ್ಲೂ 7 ಕೋಟಿಗೂ ಹೆಚ್ಚು ಮತ್ತು ಹತ್ತು ಸಹಕಾರ ಸಂಘಗಳಿಂದಲೂ ಹೂಡಿಕೆಯಾಗಿದೆ. ಐಟಿ ತನಿಖೆ ವೇಳೆ ಈ 10 ಸಹಕಾರ ಸಂಘಗಳ ಪೈಕಿ ಎಂಟು ಅಸ್ತಿತ್ವದಲ್ಲೇ ಇಲ್ಲ.

ಮತ್ತೊಂದು ಆಶ್ಚರ್ಯಕರವಾದ ಸಂಗತಿ ಎಂದರೆ, ಎಲ್ಲರ ಹೂಡಿಕೆಯ ಕೇಂದ್ರ ಬಿಂದುವಾದ ಸೌಭಾಗ್ಯ ಶುಗರ್ಸ್ ಸಂಸ್ಥೆ ವಾಸ್ತವದಲ್ಲಿ ಬೇನಾಮಿ ಎಂಬುದು ಐಟಿ ತನಿಖೆಯಿಂದ ತಿಳಿದುಬಂದಿದೆ. ಈ ಬಗ್ಗೆ ಐಟಿ ಅಧಿಕಾರಿಗಳು ದಾಖಲೆಗಳ ಪರಿಶೀಲನೆ ನಡೆಸುತ್ತಿದ್ದಾರೆ.